ಕಾಲುದಾರಿ

# ನಿರಂಜನ 'ವಿಮೋಚನೆ' ಕಾದಂಬರಿ: ನಗರ ಬದುಕಿನ ವಾಸ್ತವ ಚಿತ್ರಣದ ಜೀವನ ವೃತ್ತಾಂತದ ಅನಾವರಣ

ಸಿ. ಬಿ. ಹೊನ್ನುಸಿದ್ಧಾರ್ಥ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು.

DOI: https://doi.org/10.5281/zenodo.13870631

**ABSTRACT:**

ಮಾರ್ಕ್ಸ್‌ವಾದಿ ಸಿದ್ಧಾಂತದಿಂದ ಪ್ರಭಾವಿತರಾದ ನಿರಂಜನರು ವೈಚಾರಿಕ ಚಿಂತನೆಯುಳ್ಳವರಾಗಿದ್ದರು. ಅವರ ಮೊದಲ ಕಾದಂಬರಿಯಾದ 'ವಿಮೋಚನೆ'ಯೂ ವರ್ತಮಾನದಲ್ಲಿ ನಿಂತು ಭೂತವನ್ನು ಕೆಣಕುತ್ತಾ ಹೋಗುವ ನಿರೂಪಣಾ ತಂತ್ರಗಾರಿಕೆಯ ಮೂಲಕ ಕಾದಂಬರಿಯ ಉದ್ದಕ್ಕೂ ನೀತಿಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯನ್ನು ವ್ಯಂಗ್ಯಭರಿತ ದಾಟಿಯಲ್ಲಿ ಕುಟುಕಿದ್ದಾರೆ. ಬಾಲ್ಯದಿಂದಲೂ ಕಡುಬಡತನದ ಬದುಕು ನಡೆಸಿದ್ದ ಕಥಾನಾಯಕ ಚಂದ್ರಶೇಖರನಿಗೆ ತನ್ನ ಬದುಕಿನಲ್ಲಿ ಉಂಟಾದ ದುರ್ಘಟನೆಗಳು ದೊಡ್ಡ ಹೊಡೆತವನ್ನು ನೀಡುತ್ತವೆ. ಅವನು ಇಟ್ಟ ಪ್ರೀತಿ, ವಿಶ್ವಾಸ, ನಂಬಿಕೆಗಳೇ ಅವನಿಗೆ ಮುಳುವಾಗಿ ಸಾಮಾಜಿಕ ವ್ಯವಸ್ಥೆ ಅವನ ಬಡತನವನ್ನು ತನ್ನ ಲಾಭಕ್ಕಾಗಿ ಬಳಸಿಕೊಂಡು ಅವನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ಜೈಲು ಶಿಕ್ಷೆಗೆ ಒಳಗಾದ ಚಂದ್ರಶೇಖರ ತಾನು ನಿರಪರಾಧಿ ಎಂದು ಸಮಾಜಕ್ಕೆ ತಿಳಿಸಲು ಬರವಣಿಗೆಯ ಮಾರ್ಗವನ್ನು ಆಯ್ಕೆ ಮಾಡಿಕೊಂಡು ತನ್ನ 'ಆತ್ಮಕಥೆ'ಯನ್ನು ಬರೆಯುವ ಮೂಲಕ ಜನತಾ ನ್ಯಾಯಾಲಯದಲ್ಲಿ ಕಳಂಕ ರಹಿತ ವ್ಯಕ್ತಿಯೆಂದು 'ವಿಮೋಚನೆ' ಪಡೆಯುವ ಹಂಬಲವನ್ನು ವ್ಯಕ್ತಪಡಿಸುತ್ತಾನೆ.

**KEYWORDS:**

ವಿಮೋಚನೆ, ವರ್ಗ, ಅಜ್ಜಿ, ಕಳ್ಳತನ, ಶಿಕ್ಷೆ, ಆತ್ಮಕಥೆ.

ಕುಳಕುಂದ ಶಿವರಾಯರು ಆಧುನಿಕ ಕನ್ನಡ ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ನಿರಂಜನರಾಗಿ, ಕಥೆ ಕಾದಂಬರಿಗಾರರಾಗಿ ಗುರುತಿಸಿಕೊಂಡಿದ್ದಾರೆ. ಮಾರ್ಕ್ಸ್‌ವಾದಿ ಸಿದ್ಧಾಂತದಿಂದ ಪ್ರಭಾವಿತರಾದ ನಿರಂಜನರು ವಿದ್ಯಾರ್ಥಿ ದೆಸೆಯಿಂದಲೇ ಎಡಪಂಥೀಯ ಚಿಂತನೆಗಳನ್ನು ಮೈಗೂಡಿಸಿಕೊಂಡು ಹೋರಾಟದಲ್ಲಿ ಧುಮುಕಿದವರು.

ಅಸಮಾನತೆಯ ಸಮಾಜ ವ್ಯವಸ್ಥೆಯಲ್ಲಿ ಬಡವರ, ನಿರ್ಗತಿಕರ, ರೈತರ, ಕೂಲಿ ಕಾರ್ಮಿಕರ, ಮಹಿಳೆಯರ ಸಮಸ್ಯೆಗಳನ್ನು ಸಾಹಿತ್ಯ ಅಭಿವ್ಯಕ್ತಿಯಲ್ಲಿ ಮುಖ್ಯ ಭಿತ್ತಿಯಾಗಿಸಿಕೊಂಡು, ಸೈದ್ಧಾಂತಿಕ, ತಾತ್ವಿಕ ಆಯಾಮಗಳಲ್ಲಿ ನಿರ್ವಹಿಸಿದವರು. ಆ ಮೂಲಕ ಶೋಷಕರ, ಭೂಮಾಲೀಕರ, ಬಂಡವಾಳಶಾಹಿಗಳ, ಕಾರ್ಖಾನೆ ಮಾಲೀಕರುಗಳ, ಜಮೀನ್ದಾರಿ ವ್ಯವಸ್ಥೆಯ ಶೋಷಣೆ, ದಬ್ಬಾಳಿಕೆ, ದೌರ್ಜನ್ಯ, ಕ್ರೌರ್ಯಗಳನ್ನು ಬೆತ್ತಲುಗೊಳಿಸಿ ಸಮಾಜ ಬದಲಾವಣೆಗೆ ವರ್ಗಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಗಳ ಮಹತ್ವವನ್ನು ಸಾದರಪಡಿಸಿದರು.

ವಿಮೋಚನೆ ಕಾದಂಬರಿ ನಿರಂಜನರ ಚೊಚ್ಚಲ ಕಾದಂಬರಿಯಾದರೂ ಅದು ತನ್ನ ವಸ್ತು ನಿರ್ವಹಣೆಯಲ್ಲಿ ವಿಶಿಷ್ಟವಾದ ಪ್ರಯೋಗಶೀಲತೆ, ನಿರೂಪಣಾ ತಂತ್ರಗಳಿಂದ ಗಮನ ಸೆಳೆಯುತ್ತದೆ. ಈ ವಿಮೋಚನೆ ಕಾದಂಬರಿಯ ಆರಂಭದಲ್ಲಿಯೇ ಬರುವ "ಬರೆದವರು ಮತ್ತು ಕೃತಿ" ಇದು ಕೃತಿಯ ಕೃತಜ್ಞತೆಯ ಪ್ರತೀಕದ ಭಾಗವಾಗಿದೆ. ಕೃತಜ್ಞತೆಯನ್ನು ಒಂದು ಸಂವಾದದ ಸಂಭಾಷಣೆಯ ರೂಪದಲ್ಲಿ ಕಟ್ಟಿಕೊಟ್ಟಿರುವುದು ಕಾದಂಬರಿಯ ಲೋಕದಲ್ಲಿ ಆ ಕಾಲಕ್ಕೆ ಹೊಸ ಪ್ರಯೋಗ. ಹಾಗೆಯೇ ಈ ಭಾಗ ಬರಹಗಾರನಿಗೂ ಮತ್ತು ಓದುಗನಿಗೂ ಸಂವಾದ ಏರ್ಪಡಿಸುವ ಈ ಮಾದರಿ ಅರ್ಥಪೂರ್ಣವಾಗಿ ನಿರೂಪಿತಗೊಂಡಿದೆ. ಕಾದಂಬರಿ ಪ್ರಕಟವಾಗುವ ಮೊದಲೇ ಈ ಕಾದಂಬರಿಯ ಬಗ್ಗೆ ಓದುಗರಲ್ಲಿ ಸಂವಾದ, ಚರ್ಚೆ ಏರ್ಪಡಿಸಿರುವ ಈ ಮಾದರಿ ಓದುಗರ ಓಪೀನಿಯನ್ ಕ್ರಿಯೇಟ್ ಮಾಡುವ ತಂತ್ರಗಾರಿಕೆ. ಇದು ಕೂಡ ಆ ಕಾಲಕ್ಕೆ ಹೊಸತು.

ಕಾದಂಬರಿಯಲ್ಲಿ ನಾಯಕನ ಆತ್ಮಕಥೆ ಒಂದೇ ಒಂದು ವಾರದಲ್ಲಿ ಮುಕ್ತಾಯವಾಗುವಂತೆ ಇದರ ನಿರೂಪಣಾ ತಂತ್ರಗಾರಿಕೆ ಇದೆ. ಈ ಕಾದಂಬರಿ ಮಂಗಳವಾರದಿಂದ ಆರಂಭವಾಗಿ ಅದು ಮತ್ತೊಂದು ಮಂಗಳವಾರಕ್ಕೆ ಮುಕ್ತಾಯವಾಗುತ್ತದೆ. ಕಾದಂಬರಿಕಾರ ವೈಚಾರಿಕವಾದಿ. ಆದ್ದರಿಂದ ತನ್ನ ಕಥಾನಾಯಕರಿಂದ ಆತ್ಮಕಥೆಯ ಬರವಣಿಗೆಯನ್ನು ಮಂಗಳವಾರ ಆರಂಭಿಸುತ್ತಾರೆ. ಸಂಪ್ರದಾಯವಾದಿಗಳಿಗೆ ಮಂಗಳವಾರ ಅಶುಭದ ದಿನವಾಗಿದೆ. 'ಜೀವಮಾನದಲ್ಲಿ ಒಂದು ಸಾರಿಯೂ ಘಳಿಗೆ, ಮಹೂರ್ತ ನೋಡದ ನಾನು ಈಗ ಶುಭ ಅಶುಭಗಳ ಯೋಚನೆ ಮಾಡಲೇ? ಹೆಸರು ಮಂಗಳವಾರ, ಮಂಗಳ ಎಂದರೆ ಒಳಿತು ಎಂದು ಕೇಳಿದ್ದೇನೆ. ಅಷ್ಟು ಸಾಕು"– ಇದು ಇಲ್ಲಿಯ ಕಥಾನಾಯಕನ ವೈಚಾರಿಕ ಆಲೋಚನೆ.

ವರ್ತಮಾನದಲ್ಲಿ ನಿಂತು ಭೂತವನ್ನು ಕೆಣಕುತ್ತಾ ಹೋಗುವ ನಿರೂಪಣಾ

ತಂತ್ರಗಾರಿಕೆ ಈ ಕಾದಂಬರಿಯದು. ಈ ತಂತ್ರಗಾರಿಕೆ ಕಾದಂಬರಿಯ ಉದ್ದಕ್ಕೂ ಹೀಗೆಯೇ ನಡೆಯುತ್ತದೆ. ಅದು ಜನಪದ ಕಥೆಯ ದಾಟಿಯ ತಂತ್ರಗಾರಿಕೆಯಾಗಿದೆ. ಓದುಗರಿಗೆ ಕಥಾನಾಯಕ ತನ್ನ ಜೀವನ ವೃತ್ತಾಂತವನ್ನು ಹೇಳುವಾಗ ಇದರ ಪ್ರಯೋಗಶೀಲತೆ ಇದೆ. ಕಾದಂಬರಿಯ ಉದ್ದಕ್ಕೂ ನಗರ ಬದುಕಿನ ಸಾಮಾಜಿಕ ವಿಷಮತೆಯಿಂದಾಗಿ ವ್ಯಂಗ್ಯ ಭರಿತ ದಾಟಿಯಲ್ಲಿ ನಿರೂಪಣಾ ತಂತ್ರಗಾರಿಕೆ ಕಂಡು ಬರುತ್ತದೆ.

ವಿಮೋಚನೆ ಕಾದಂಬರಿಯ ಕಥಾ ವಸ್ತು ನಗರ ಬದುಕಿನ ವಿದ್ಯಾವಂತನೊಬ್ಬನ ಅತಂತ್ರ ಸ್ಥಿತಿಯ ಧಾರುಣತೆಯನ್ನು ಕಟ್ಟಿಕೊಡುವ ಕರುಣಾಜನಕ ದುರಂತ ಜೀವನದ ಚಿತ್ರಣವಾಗಿದೆ. ಅಲ್ಲದೆ ಈ ಕಾದಂಬರಿ ಕಾರ್ಮಿಕರ–ಮಾಲೀಕ ವರ್ಗ ಹೋರಾಟವನ್ನು ಪ್ರತಿನಿಧಿಸುತ್ತದೆ. ಆ ಮೂಲಕ ಇಡೀ ನಗರ ಬದುಕಿನ ಜೀವನ ವೃತ್ತಾಂತವನ್ನು ಪ್ರತಿನಿಧಿಸುತ್ತದೆ. ಈ ದಿಕ್ಕಿನಲ್ಲಿ ಕಾದಂಬರಿ ವಿಭಿನ್ನವಾದದು. ಹಳ್ಳಿಯಿಂದ ನಗರ ಜೀವನಕ್ಕೆ ಬಂದ ನಾಯಕ ಚಂದ್ರಶೇಖರ ಜೀವನ ನಿರ್ವಹಣೆಯಲ್ಲಿ ಅನುಭವಿಸಿದ ಕಷ್ಟ ಕಾರ್ಪಣ್ಯಗಳು, ಸಂಭವಿಸಿದ ಆಕಸ್ಮಿಕ ಘಟನೆಗಳು, ಅಪರಾಧಿಯನ್ನಾಗಿ ಮಾಡುವ ವ್ಯವಸ್ಥೆಯ ಹುನ್ನಾರಗಳು, ಅದರಿಂದ ಅನುಭವಿಸಿದ ಜೈಲು ಶಿಕ್ಷೆ, ತಾನೇ ಸ್ನೇಹ ಸಹವಾಸದಿಂದ ಮಾಡಿಕೊಂಡ ಸ್ವಯಂಕೃತ ಅಪರಾಧಗಳ ಪ್ರಾಯಶ್ಚಿತತೆ, ತಾನು ಮಾಡದೆ ಇರುವ ಅಪರಾಧಗಳಿಂದ ವಿಮೋಚನೆ ಹೊಂದಲು ಜೈಲಿನಿಂದಲೇ ತಾನು ಬರೆಯುವ ಆತ್ಮಕತೆಯ ಮೂಲಕ ತನ್ನ ಬಿಡುಗಡೆಯನ್ನು ಹಂಬಲಿಸುವ ತರ್ಕ ಬದ್ಧವಾದ ವಾಸ್ತವಿಕತೆಯ ಚಿತ್ರಣದ ಕಥೆ ಇದಾಗಿದೆ.

ಚಂದ್ರಶೇಖರನ ಮನಸ್ಸಿನ ಆತ್ಮಸಾಕ್ಷಿ ಈ ಆರೋಪಗಳನ್ನು ಒಪ್ಪಿಕೊಳ್ಳದೆ ಅಪಮಾನ, ಅವಮಾನಗಳ ಬೆಂಕಿಯ ಬಲೆಯಲ್ಲಿ ನರಕ ಹಿಂಸೆಯಿಂದ ನರಳಾಡುವಂತೆ ಮಾಡಿದೆ. ಅದಕ್ಕಾಗಿ ಈ ಆರೋಪಗಳಿಂದ ಮುಕ್ತನಾಗಬೇಕೆಂದು ತೀವ್ರವಾಗಿ ಯೋಚಿಸಿ ಹಂಬಲಿಸುತ್ತದೆ. ಹಾಗಾಗಿ ಇಲ್ಲಿಂದ ಬಿಡುಗಡೆ ಹೊಂದಲು ನಾಯಕ ಚಂದ್ರಶೇಖರ ಕಂಡುಕೊಂಡ ಅಸ್ತ್ರವೆಂದರೆ ಅದು ಬರವಣಿಗೆ. ಆತನೆ ಹೇಳಿಕೊಂಡಂತೆ "ನಾನು ಬರಹಗಾರನಲ್ಲ, ಸಾಹಿತ್ಯ ಸೃಷ್ಟಿ ನನ್ನ ಉದ್ದೇಶವಲ್ಲ, ನಾನು ಹಿಂದೆಂದು ಬರೆದುದಿಲ್ಲ, ಆದರೂ ಈಗ ಲೇಖನಿ ಎತ್ತಿ ಬರೆಯತೊಡಗಿದ್ದೇನೆ. ಹೇಳಬೇಕಾದ ಕೆಲವು ವಿಷಯಗಳು ನನ್ನಲ್ಲಿವೆ, ಅವುಗಳನ್ನು ನಾನು ಹೇಳಲೇಬೇಕು. ಮೂವತ್ತೆಂಟು ವರ್ಷಗಳ ಕಾಲ ನನಗೆ ಅನ್ನ, ನೀರು, ಗಾಳಿ, ಬೆಳಕು ಕೊಟ್ಟ ಈ ಲೋಕವನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, ಆ ವಿಷಯಗಳನ್ನು ನಾನು ಬರೆದಿಡಲೇಬೇಕು." ಈ ಬರವಣಿಗೆಯಿಂದ ತನ್ನ ಆತ್ಮಕಥೆ ಬರೆದು ಆ ಮೂಲಕ ತನ್ನ ಮೇಲಿನ ಆರೋಪಗಳಿಂದ ಮುಕ್ತಿ ಹೊಂದಲು ಹವಣಿಸುತ್ತಾನೆ. ಇಂತಹ ಬರವಣಿಗೆಗೆ ಆತನಿಗೆ ಪ್ರೇರಣೆ ಆದದ್ದು, ಪರಿಚಯವಿದ್ದ ಬರಹಗಾರ ಮತ್ತು ಸಾಹಿತ್ಯ ಕೃತಿಗಳ ಪ್ರಭಾವದಿಂದ ಅದು ಸಾಧ್ಯವಾಗಿದೆ. ಇಂತಹ ಪ್ರೇರಣೆಯಿಂದ ಬರವಣಿಗೆಯ ಆತ್ಮಕಥೆಯ ಮೂಲಕ ಕಥಾನಾಯಕ ಚಂದ್ರಶೇಖರ ತಾನು ರೂಪಿಸಿಕೊಂಡ

ಯೋಜನೆಯಂತೆ ವರ್ತಮಾನದಲ್ಲಿ ನಿಂತು ಭೂತವನ್ನು ಆತ್ಮಕಥೆಯಲ್ಲಿ ಕಟ್ಟುತ್ತಾ ತನ್ನ ಬದುಕಿನಲ್ಲಿ ನಡೆದು ಹೋದ ಎಲ್ಲಾ ಘಟನೆಗಳನ್ನು ಅಲ್ಲಿ ಬಿಡಿಸಿ, ಜೋಡಿಸುತ್ತಾ ಹೇಳುತ್ತಾನೆ. ಹೀಗೆ ಕಾದಂಬರಿ ಮುಂದಿನ ಬೆಳವಣಿಗೆಯಲ್ಲಿ ತನ್ನ ನಡುಗೆಯನ್ನು ಬಿಚ್ಚಿಡುತ್ತಾ ಹೋಗುತ್ತದೆ.

ವಿದ್ಯಾವಂತನಾದ ಬಾಲಕ ಚಂದ್ರಶೇಖರ್ ಹಳ್ಳಿಯ ಬಡ ಮೇಷ್ಟ್ರರಾದ ಅಪ್ಪನೊಂದಿಗೆ ಹಳ್ಳಿಯಲ್ಲಿನ ಬಡತನದ ಭೀಕರತೆಯಿಂದಾಗಿ ನಗರ ಸೇರುತ್ತಾನೆ. ಈ ನಗರ ಸೇರುವ ಮುನ್ನವೇ ಹೇಮಾವತಿ ನದಿ ದಾಟುವ ಸಂದರ್ಭದಲ್ಲಿ ನದಿಯ ಪ್ರವಾಹದ ಹೊಡೆತಕ್ಕೆ ಸಿಕ್ಕಿ ತಾಯಿಯನ್ನು ಕಳೆದುಕೊಳ್ಳುತ್ತಾನೆ. ಈ ದುರ್ಘಟನೆ ಆತನ ಬದುಕಿಗೆ ಮೊದಲ ಹೊಡೆತವಾಗಿದೆ. ಹಳ್ಳಿಯಲ್ಲಿ ಸಾಲದ ಸುಳಿಗೆ ಸಿಕ್ಕಿ ತತ್ತರಿಸಿ ಹೋಗಿದ್ದ ಚಂದ್ರಶೇಖರನ ಅಪ್ಪ ನಗರಕ್ಕೆ ಬಂದು, ನಗರದ ಕೂಲಿ ಕಾರ್ಮಿಕನಿಂದ ಕೂಲಿ ಕೆಲಸಗಾರನಾಗಿ ಉದ್ಯೋಗ ಪಡೆಯುತ್ತಾನೆ. ಚಂದ್ರಶೇಖರನ ಅಪ್ಪನಿಗೆ ಕೂಲಿಯ ಉದ್ಯೋಗವೇನೋ ಸಿಗುತ್ತದೆ. ಆದರೆ ಅಲ್ಲಿ ವಾಸ ಮಾಡಲು ಮನೆ ಸಿಗದೇ ನಗರದ ಬೀದಿಯಲ್ಲಿಯೇ ಮಲಗುವ ದುಸ್ಥಿತಿ ಬಂದಿದೆ. ಬದುಕಿನ ವೈಚಿತ್ರ್ಯವೆಂದರೆ, ಜಾತಿಯಿಂದ ಕೀಳಾದ ಅಪ್ಪ ಮಗನಿಗೆ ನಗರದಲ್ಲಿ ಯಾರು ಆಶ್ರಯ ನೀಡುವುದಿಲ್ಲ. ಅಂತಹ ಸಂದರ್ಭದಲ್ಲಿ ಜಾತಿಯಿಂದ ಮೇಲಾದ ಬ್ರಾಹ್ಮಣರ ವಿಧಿವೆ ಅಜ್ಜಿಯೊಬ್ಬಳು ಆ ಬಡವರ ಜಾತಿ, ಬಡತನ ಗೊತ್ತಾಗಿದ್ದರೂ ಆಕೆಯ ಜಾತಿ ಮೀರಿದ ಮಾನವೀಯತೆ ಆಶ್ರಯ ನೀಡಿ ತಾಯಿಯಂತೆ ಪೋಷಿಸುತ್ತದೆ. ಈ ಮಾನವೀಯತೆಯ ಮೂರ್ತಿ ಅಜ್ಜಿಯು ಚಂದ್ರಶೇಖರನ ಅಪ್ಪನ ಆಸೆಯಂತೆ ಮಗನ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿ ಭವಿಷ್ಯ ರೂಪಿಸಲು ನೆರವಾಗುತ್ತಾಳೆ. ಚಂದ್ರಶೇಖರನ ಅಪ್ಪ ಮಗನ ವಿದ್ಯಾಭ್ಯಾಸಕ್ಕಾಗಿ ನಗರದಲ್ಲಿ ಕೂಲಿಯ ನಾನಾ ಕೆಲಸಗಳನ್ನು ಕಷ್ಟಪಟ್ಟು ಮಾಡಲು ತೊಡಗುತ್ತಾನೆ. ಈ ಅಪ್ಪನ ಕೂಲಿಗಳ ಉದ್ಯೋಗದ ಹಿಂದೆ ತನ್ನ ಮಗ ದೊಡ್ಡ ವಿದ್ಯಾವಂತನಾಗಬೇಕೆಂದು ದೊಡ್ಡ ಕನಸು ಎದ್ದು ನಿಂತಿರುತ್ತದೆ. ಈ ಕನಸನ್ನು ಈಡೇರಿಸಲು ಕೂಲಿ ಕೆಲಸಗಳಿಂದಾಗಿ ಕ್ಷಯ ರೋಗಕ್ಕೆ ತುತ್ತಾಗುತ್ತಾನೆ. ಕ್ಷಯರೋಗದ ಅಪ್ಪನ ಅನಾರೋಗ್ಯದಿಂದಾಗಿ ಜೀವನ ನಿರ್ವಹಣೆ ಕಷ್ಟವಾದಾಗ ಚಂದ್ರಶೇಖರ ಶಾಲೆ ಬಿಟ್ಟು ಪೇಪರ್ ಮಾರುವ ಹುಡುಗನಾಗಿ ಬದಲಾಗುತ್ತಾನೆ. ಈ ಪೇಪರ್ ಮಾರುವ ಕೆಲಸವೇ ಆತನಿಗೆ ಮುಳುವಾಗುತ್ತದೆ. ಪೇಪರ್ ಮಾರುವ ಸಂದರ್ಭದಲ್ಲಿ ಚಂದ್ರಶೇಖರನ ಬದುಕಿನಲ್ಲಿ ಪಿಕ್ ಪ್ಯಾಕೆಟ್ ಆಗುವ ಘಟನೆ ಸಂಭವಿಸುತ್ತದೆ. ಬದುಕಿನ ಕಡು ಬಡತನದ ಭೀಕರತೆಯಲ್ಲಿ ಕುಟುಂಬ ನಿರ್ವಹಣೆಗಾಗಿ ಚಂದ್ರಶೇಖರನಿಗೆ ಕೆಲಸ ಕೊಡಿಸಿದ್ದ ಪೇಪರ್ ಹುಡುಗ ಅದೇ ಸರ್ಕಲ್‌ನಲ್ಲಿದ್ದ ವ್ಯಕ್ತಿಯೊಬ್ಬರಿಂದ ಪಿಕ್ ಪ್ಯಾಕೆಟ್ ಮಾಡಿ ಹಣವನ್ನು ಕದ್ದು ಪರಾರಿಯಾಗಿದ್ದಾನೆ. ಆದರೆ ಅದೇ ಸರ್ಕಲ್‌ನಲ್ಲಿಯೇ ಪೇಪರ್ ಮಾರುತಾನಿಂತಿದ್ದ ಚಂದ್ರಶೇಖರ್‌ನನ್ನು ಪೊಲೀಸರು ಹಿಡಿದು ಲಾಕಪ್ಗೆ ಹಾಕುತ್ತಾರೆ. ಆದರೆ ಈ ಪಿಕ್ ಪ್ಯಾಕೆಟ್ ಮಾಡಿದ ಹುಡುಗ ಅಲ್ಲಿಯೆ ಹಿಂದೆ ಕಾಣದಂತೆ ನಿಂತಿದ್ದರೂ ಚಂದ್ರಶೇಖರ್ ಪೇಪರ್ ಮಾರುವ ಆ ಹುಡುಗನನ್ನು ಈತನೇ ಕಳ್ಳ ಎಂದು ಹೇಳುವುದಿಲ್ಲ. ಏಕೆಂದರೆ ಆ ಹುಡುಗನದು

ಭೀಕರ ಬಡತನದ ಕುಟುಂಬವಾದ್ದರಿಂದ, ತಾನು ಬಡವನಾದ ಚಂದ್ರಶೇಖರ್ ಆ ಹುಡುಗನನ್ನು ಹಿಡಿದು ಕೊಡುವುದಿಲ್ಲ. ಈ ಪ್ರಕರಣದಲ್ಲಿ ಚಂದ್ರಶೇಖರ್ ಅಪರಾಧಿಯಾಗದಿದ್ದರೂ ಪೊಲೀಸ್‌ನವರು ಚಂದ್ರಶೇಖರನ್ನು ಅಪರಾಧಿಯಾಗಿ ಮಾಡುತ್ತಾರೆ. ಮಗ ದೊಡ್ಡ ವಿದ್ಯಾವಂತನಾಗಬೇಕೆಂಬ ಮಹಾದಾಸೆ ಹೊತ್ತಿದ್ದ ಅಪ್ಪನಿಗೆ ಮಗನ ಈ ಕಳ್ಳತನದ ಘಟನೆಯಿಂದಾಗಿ ಅವನನ್ನು ಲಾಕಪ್‌ನಲ್ಲಿ ಕಂಡು ಆ ಕೊರಗಿನಲ್ಲಿಯೇ ಪ್ರಾಣ ಬಿಡುತ್ತಾನೆ. ಇದು ಚಂದ್ರಶೇಖರನಿಗೆ ಆತನ ಬದುಕು ಎರಡನೆಯ ಹೊಡೆತ ಕೊಡುತ್ತದೆ.

ತಂದೆ ತಾಯಿಯನ್ನು ಕಳೆದುಕೊಂಡು ಅನಾಥನಾದ ಚಂದ್ರಶೇಖರ್ ಮುಂದಿನ ಬದುಕಿನ ದಿಕ್ಕು ಕಾಣದೆ ಅತಂತ್ರ ಸ್ಥಿತಿಯ ಬೆಂಕಿಯ ಬಲೆಯಲ್ಲಿ ಸಿಲುಕಿಕೊಳ್ಳುತ್ತಾನೆ. ಈತನ ಬದುಕು ಈ ನಗರ ಬದುಕಿನಿಂದ ದೊಡ್ಡ ನಗರವಾದ ಬಾಂಬೆಗೆ ಕರೆದುಕೊಂಡು ಹೋಗುತ್ತದೆ. ಚಂದ್ರಶೇಖರನ ಅತಂತ್ರ ಸ್ಥಿತಿಯನ್ನು ಅರ್ಥ ಮಾಡಿಕೊಂಡ ತಾಯಿಯಂತಿದ್ದ ಅಜ್ಜಿ ಚಂದ್ರಶೇಖರನನ್ನು ಭಾರವಾದ ಮನಸ್ಸಿನಿಂದಲೇ ಬಾಂಬೆಗೆ ಹೋಗಲು ಒಪ್ಪಿಗೆ ನೀಡಿ, ಬೇಗ ವಾಪಸ್ ಬರುವ ಪ್ರೀತಿಯ ಷರತ್ತು ಹಾಕಿ ಕಳುಹಿಸಿಕೊಡುತ್ತಾಳೆ. ಬಾಂಬೆಯಲ್ಲಿ ರೈಲ್ವೆ ನಿಲ್ದಾಣದ ಹಮಾಲಿ ಕೂಲಿ ಕೆಲಸಗಾರನ ಬದುಕು ಕಂಡುಕೊಂಡ ಚಂದ್ರಶೇಖರ್ ಬಾಂಬೆಯ ದೊಡ್ಡ ಕಳ್ಳ ಅಮೀರ್‌ನ ಸ್ನೇಹ ಬೆಳೆಸಿ ಆತನ ಅಪರಾಧಗಳಲ್ಲಿ ಭಾಗಿಯಾಗುತ್ತಾನೆ. ಅಮೀರ್ ಮುಸ್ಲಿಮನಾದರೂ ಹಿಂದೂವಾದ ಚಂದ್ರಶೇಖರನ ಸ್ನೇಹ, ಅವನ ಮುಗ್ಧತೆ, ಪ್ರಾಮಾಣಿಕ ಪ್ರೀತಿ, ವಿಶ್ವಾಸಗಳಿಂದಾಗಿ ತನ್ನ ಮನೆಯಲ್ಲಿಯೇ ಆಶ್ರಯ ನೀಡಿ ಇಟ್ಟುಕೊಂಡು ಕಳ್ಳತನದ ಮೂಲಕ ಐಷಾರಾಮಿ ಜೀವನದ ಬದುಕನ್ನು ನಡೆಸಲು ನೆರವಾಗುತ್ತಾನೆ. ಅಮೀರ್ ದೊಡ್ಡ ಕಳ್ಳನಾದರೂ ಪ್ರೀತಿ ಮಾನವೀಯತೆ ಇರುವ ವ್ಯಕ್ತಿ. ಆತನ ಜಾತಿ, ಧರ್ಮ ಮೀರಿದ ಮನಸ್ಸು ಬಾಂಬೆ ನಗರದಲ್ಲಿ ಬಡತನದ ಕಾರಣದಿಂದಾಗಿ ಬದುಕಲು ವೇಶ್ಯೆಯಾಗಿದ್ದ ಹಿಂದೂ ಧರ್ಮದ ಶೀಲಳನ್ನು ಹೆಂಡತಿಯಾಗಿ ಸ್ವೀಕರಿಸಿ ಆಕೆಯ ಅನಾರೋಗ್ಯದ ತಂದೆಯನ್ನು ಜೊತೆಯಲ್ಲಿಟ್ಟುಕೊಂಡು ಬಾಂಬೆಯಲ್ಲಿ ಬದುಕು ಕಟ್ಟಿಕೊಂಡಿದ್ದಾನೆ. ಹಾಗೆಯೇ ಹಿಂದೂವಾದಂತಹ ಚಂದ್ರಶೇಖರ್‌ನನ್ನೂ ನನ್ನ ಜೊತೆಯಲ್ಲಿಯೇ ಸೇರಿಸಿಕೊಂಡು ಆಶ್ರಯ ನೀಡುತ್ತಾನೆ.

ಈ ಮಧ್ಯೆ ಚಂದ್ರುವಿಗೆ ಬಾಂಬೆಯಲ್ಲಿನ ಕಳ್ಳತನದ ಬದುಕು ಬೇಡವೆನಿಸುತ್ತದೆ. ತಾನು ಸ್ವಯಂ ಆಗಿ ಮಾಡಿಕೊಂಡ ಕಳ್ಳತನದ ಅಪರಾಧಗಳಿಂದ ಆತನ ಪ್ರಾಯಶ್ಚಿತತೆಯ ಮನಸ್ಸು ಖಿನ್ನತೆಗೆ ಒಳಗಾಗುತ್ತದೆ. ಇದರ ಜೊತೆಗೆ ಊರಿನಿಂದ ತಾಯಿ ಅಂತಿದ್ದ ಅಜ್ಜಿಯು ಬರೆದ ಪತ್ರಗಳಿಂದ, ಅಜ್ಜಿಯ ಅನಾರೋಗ್ಯದ ಚಿಂತೆನೆಗಳಿಂದಲೂ ಚಂದ್ರು ಗಾಢವಾಗಿ ಚಿಂತಿಸಿ ಬಾಂಬೆ ಬದುಕನ್ನು ಬಿಟ್ಟು ವಾಪಸ್ ನಗರಕ್ಕೆ ಬಂದು ಬಿಡುತ್ತಾನೆ. ನಗರಕ್ಕೆ ವಾಪಸ್ ಬಂದ ಚಂದ್ರುವಿಗೆ ಅಜ್ಜಿಯ ತೀವ್ರವಾದ ಅನಾರೋಗ್ಯದ ಚಿಂತೆ ಆವರಿಸುತ್ತದೆ. ನಗರಕ್ಕೆ ಬಂದ ಆರಂಭದಲ್ಲಿ ಆಶ್ರಯವಿಲ್ಲದೆ ದಿಕ್ಕು ಕಾಣದೆ ಅತಂತ್ರ ಸ್ಥಿತಿಯಲ್ಲಿ ಅಲೆಯುತ್ತಿದ್ದಾಗ ದೇವತೆಯಂತೆ

ಕಂಡ ಈ ಮಹಾತಾಯಿ ಅಜ್ಜಿಯನ್ನು ಉಳಿಸಿಕೊಳ್ಳಲು ತೀವ್ರ ಪ್ರಯತ್ನ ಮಾಡುತ್ತಾನೆ. ಆದರೆ ಚಂದ್ರುವಿನ ಬದುಕು, ಅಜ್ಜಿಯ ಸಾವನ್ನು ನೀಡಿ ಆತನಿಗೆ ಮೂರನೆಯ ಹೊಡೆತ ಹೊಡೆಯುತ್ತದೆ.

ಈಗ ಚಂದ್ರುವಿನ ಬದುಕಿನಲ್ಲಿ ತನ್ನ ತಂದೆ, ತಾಯಿ, ಈಗ ತಾಯಿಯಂತಿದ್ದ ಅಜ್ಜಿಯನ್ನು ಕಳೆದುಕೊಂಡು ಅನಾಥ ಸ್ಥಿತಿಯನ್ನು ತಂದೊಡ್ಡುತ್ತದೆ. ವಿದ್ಯಾವಂತನಾಗಿದ್ದ ಚಂದ್ರುವಿಗೆ ನಗರದಲ್ಲಿ ಎಲ್ಲಿಯೂ ಕೆಲಸ ಸಿಗದೇ ತಾನು ಬಾಂಬೆಯಲ್ಲಿ ಅಮೀರನಿಂದ ಕಲಿತುಕೊಂಡಿದ್ದ ಕಳ್ಳತನವನ್ನೇ ತನ್ನ ಬದುಕಿನ ಕಸುಬಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ. ನಗರದಲ್ಲಿ ಕಳ್ಳತನ ಮಾಡಿ ತನ್ನ ಐಷಾರಾಮಿ ಜೀವನವನ್ನು ನಡೆಸಲು ಆರಂಭಿಸಿದ ಚಂದ್ರುವಿನ ಕಳ್ಳತನದಲ್ಲಿ ಒಂದು ವಿಶೇಷತೆ ಇದೆ. ಬಡವರ ಹಣ ಪಿಕ್ ಪ್ಯಾಕೆಟ್ ಮಾಡಿದಾಗ ಆತನ ಮನಸ್ಸು ಅದನ್ನು ಬಳಸಿಕೊಂಡು ಅನುಭವಿಸಲು ಪಶ್ಚಾತಾಪದ ಕಸಿವಿಸಿಯಿಂದ ಒದ್ದಾಡುತ್ತದೆ. ಆದರೆ ಅದೇ ಶ್ರೀಮಂತರ ಹಣ ಕಳ್ಳತನ ಮಾಡಿದಾಗ ಶ್ರೀಮಂತಿಕೆಯ ಹಣದ ಸಂಪಾದನೆಯನ್ನು ಪರಾಮರ್ಶಿಸಿ, ಅದನ್ನು ತನ್ನ ಜೀವನದ ಐಷಾರಾಮಿ ಜೀವನಕ್ಕೆ ಬಳಸಿಕೊಂಡು ತಾನು ಮಾಡಿದ ಕಳ್ಳತನಕ್ಕೆ ನ್ಯಾಯ, ಅನ್ಯಾಯದ ತರ್ಕವನ್ನು ಹೇಳಿ ಸಮರ್ಥಿಸುತ್ತದೆ. ಬಡತನದ ಕಷ್ಟವನ್ನು ಕಂಡಿದ್ದ ಚಂದ್ರುವಿನ ಮನಸ್ಸು ಬಡವರ ಹಣ ಕಳ್ಳತನ ಮಾಡಲು ನಿರಾಕರಿಸುತ್ತದೆ.

ಕಳ್ಳತನದ ಜೀವನ ನಡೆಸುತ್ತಿದ್ದ ಚಂದ್ರುವಿಗೆ ಈ ನಗರದ ಮತ್ತೊಬ್ಬ ದರೋಡೆಕೋರ ಚಲಂನ ಪರಿಚಯವಾಗುತ್ತದೆ. ಈ ಇಬ್ಬರ ಸ್ನೇಹ ಬ್ಯಾಂಕಿನಲ್ಲಿ ಹಣ ಕಟ್ಟಲು ಬಂದ ಶ್ರೀಮಂತ ಸೇಟುವಿನ ಹಣವನ್ನು ಲಪಟಾಯಿಸಿ ಅದನ್ನು ಹಂಚಿಕೊಳ್ಳುವಲ್ಲಿ ಬೆಸೆದುಕೊಳ್ಳುತ್ತದೆ. ಚಂದ್ರುವಿನ ಸ್ನೇಹ ಪ್ರೀತಿ, ವಿಶ್ವಾಸ, ನಂಬಿಕೆ ಕಳ್ಳತನದಲ್ಲಿನ ಪ್ರಾಮಾಣಿಕತೆ ಮುಂತಾದ ಗುಣಗಳು ಮತ್ತಷ್ಟು ಹತ್ತಿರವಾಗಲು ಕಾರಣವಾಗುತ್ತದೆ. ಈ ದರೋಡೆಕೋರ ಚಲಂನ ಜೀವನ ವಿಶಿಷ್ಟವಾದುದು. ಈ ಚಲಂ ಮದ್ರಾಸಿನ ಒಬ್ಬ ದೊಡ್ಡ ದರೋಡೆಕೋರ. ಬದುಕಲು ದೊಡ್ಡ ಗೋಡಾನ್ ಅಂಗಡಿಯವೊಂದನ್ನು ಸ್ಥಾಪಿಸಿಕೊಂಡು, ನಾನೊಬ್ಬ ದೊಡ್ಡ ಉದ್ಯಮಿಯಂತೆ ನಟಿಸಿ ನಂಬಿಸಿ ವ್ಯವಸ್ಥಿತವಾಗಿ ದರೋಡೆ ಮಾಡುತ್ತಿರುತ್ತಾನೆ. ಈತನೊಳಗೆ ಮಾನವೀಯ ಅಂತಃಕರಣವಿದೆ. ಈತನ ಹೆಂಡತಿ ಸಾವಿತ್ರಿ ಒಬ್ಬಳು ವೇಶ್ಯೆ. ಬಡತನದಿಂದ ಆ ವೃತ್ತಿಯಲ್ಲಿ ಸಿಕ್ಕಿ ಹಾಕಿಕೊಂಡು ಲೈಂಗಿಕ ರೋಗಕ್ಕೆ ತುತ್ತಾಗಿರುತ್ತಾಳೆ. ಈ ಚಲಂಗೆ ಮದ್ರಾಸಿನ ವೇಶ್ಯೆಯರ ಮನೆಯಲ್ಲಿ ಆಕೆಯ ಪರಿಚಯವಾಗುತ್ತದೆ. ಆಕೆಯನ್ನು ವೇಶ್ಯೆಯರ ಕೂಪದಿಂದ ಕರೆದುಕೊಂಡು ಬಂದು ನಾನಿರುವ ನಗರದಲ್ಲಿಯೇ ಹೆಂಡತಿಯಾಗಿ ಸ್ವೀಕರಿಸಿ ಆಕೆಯ ಲೈಂಗಿಕ ಕಾಯಿಲೆಯನ್ನು ವಾಸಿ ಮಾಡಿಸಿಕೊಂಡು ಆಕೆಯೊಡನೆ ಸಂಸಾರ ನಡೆಸುತ್ತಾನೆ. ಅವಳು ಸಹ ಚಲಂನಿಗೆ ತಕ್ಕ ಹೆಂಡತಿಯಂತೆ ನಿಯತ್ತಿನ ಸಾವಿತ್ರಿಯಾಗಿರುತ್ತಾಳೆ.

ಇನ್ನೊಂದು ಕಡೆ ಚಂದ್ರುವಿನ ಬದುಕಿಗೆ ಹೊಸ ಚೈತನ್ಯವೊಂದು ಪ್ರೇಮ–ಪ್ರೀತಿಯ ಕೊಂಡಿಯಲ್ಲಿ ಬಂಧಿಯಾಗುವಂತೆ ಬದುಕಲು ಆತನಿಗೆ ಅವಕಾಶ ಕಲ್ಪಿಸಿ

ಕೊಡುತ್ತದೆ. ನಗರದ ಶ್ರೀಮಂತರ ಬಡಾವಣೆಯ ಉದ್ಯಾನವನದಲ್ಲಿ ಕಳ್ಳತನ ಮಾಡಲು ಹೊಂಚು ಹಾಕುತ್ತಾ ಉದ್ಯಾನವನದಲ್ಲಿ ಅಡ್ಡಾಡುತ್ತಿದ್ದಾಗ ವನಜಾಳ ತಮ್ಮನಿಂದ ಆಕೆಯ ಪರಿಚಯ ಚಂದ್ರುವಿಗೆ ಲಭಿಸುತ್ತದೆ. ವನಜಾಳಿಗೆ ಚಂದ್ರು ತಾನೊಬ್ಬ ಗ್ರಾಜುಯೆಟ್, ದೊಡ್ಡ ಬಿಜಿನೆಸ್ ಮ್ಯಾನ್ ಎಂದು ಸುಳ್ಳು ಹೇಳಿ ಆಕೆಯ ಪ್ರೀತಿ ಸಂಪಾದಿಸಿ ಇಬ್ಬರು ಪರಸ್ಪರ ಪ್ರೇಮಿಗಳಾಗುತ್ತಾರೆ. ಚಂದ್ರು ವನಜಾಳ ಪ್ರೀತಿಯಲ್ಲಿ ಮುಳುಗಿ ಹೋಗಿ ಮದುವೆಯಾಗುವ ಮಟ್ಟಕ್ಕೆ ಅವರಿಬ್ಬರ ಸಂಬಂಧ ಬೆಸೆದುಕೊಳ್ಳುತ್ತದೆ. ಆದರೆ ಚಂದ್ರುವಿಗೆ ಬದುಕು ಈ ರೀತಿಯಲ್ಲಿ ಜೀವನ ನಡೆಸಲು ತೀವ್ರವಾದ ಹೊಡೆತ ಕೊಟ್ಟುಬಿಡುತ್ತದೆ. ಅದಕ್ಕೆ ಚಂದ್ರುವಿನ ವ್ಯಕ್ತಿತ್ವದ ಸುಳ್ಳು, ಮೋಸ, ವಂಚನೆ, ಆತನ ನಾಟಕೀಯತೆ ಮೂಲ ಕಾರಣವೆಂದು ನಾವು ಊಹಿಸಬಹುದು.

ದರೋಡೆ ಕೋರನಾದ ಚಲಂ ಶ್ರೀಮಂತರ ವ್ಯಾಪಾರಿ ಮಗನ ಕಾರನ್ನು ಹಣದ ಸಮೇತ ಲಾಪಟಾಯಿಸಿ ಕಾರಿನ ಅಪಘಾತದಲ್ಲಿ ಶ್ರೀಮಂತನ ಮಗ ಸಾವನ್ನು ಅಪ್ಪುವಂತೆ ಮಾಡುತ್ತಾನೆ. ಆ ಸಂದರ್ಭದಲ್ಲಿ ಚಲಂನನ್ನು ಈ ಕೇಸಿನಿಂದ ಬಚಾವ್ ಮಾಡಲು ಸ್ನೇಹಿತನಾದ ಚಂದ್ರು ವಕೀಲರ ಮೂಲಕ ಪ್ರಯತ್ನ ಮಾಡಲು ವಕೀಲರೊಬ್ಬರ ಹತ್ತಿರ ಬಂದಾಗ ವನಜಾಳ ತಂದೆಯವರಿಗೆ ಕಳ್ಳ, ಸುಳ್ಳುಗಾರನಾದ ಚಂದ್ರವಿನ ಗುಟ್ಟು ರಟ್ಟಾಗುತ್ತದೆ. ಹೀಗೆ ಇಬ್ಬರ ಪ್ರೇಮ ಅಂತ್ಯವಾಗುತ್ತದೆ. ಇದರಿಂದಾಗಿ ತೀವ್ರವಾಗಿ ನೊಂದುಕೊಂಡು ಚಂದ್ರು ವನಜಾಳ ಮೇಲಿನ ಗಾಢವಾದ ಪ್ರೇಮದ ಹುಚ್ಚಿನಿಂದಾಗಿ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೆ ಹೋಗಿರುತ್ತಾನೆ. ಚಂದ್ರುವಿಗೆ ಈ ರೀತಿಯ ಬದುಕು ನಾಲ್ಕನೆಯ ಹೊಡೆತ ಕೊಡುತ್ತದೆ.

ತಾನು ಬದುಕುತ್ತಿರುವ ಜೀವನದಲ್ಲಿ ಸಾಕಷ್ಟು ಹೊಡೆತ ತಿಂದ ಚಂದ್ರಶೇಖರ್ ವನಜಾಳ ಹುಚ್ಚು ಪ್ರೇಮದಿಂದ ಹೊರಬರಲು ಕಳ್ಳತನದ ಜೊತೆಗೆ ತೀವ್ರವಾದ ಕುಡಿತಕ್ಕೆ ಒಳಗಾಗಿ ಹೋಟೆಲ್-ಬಾರ್‌ನಲ್ಲಿ ಕುಳಿತಿದ್ದಾಗ, ಅಲ್ಲಿಗೆ ಸಹಪಾಠಿಯಾಗಿದ್ದ ಶ್ರೀಕಂಠಯ್ಯನವರು ಬಂದು ಆಕಸ್ಮಿಕವಾಗಿ ಪರಸ್ಪರ ಭೇಟಿಯಾಗುತ್ತಾರೆ. ಇಬ್ಬರೂ ಓದುತ್ತಿದ್ದಾಗ ಸಹಪಾಠಿಗಳಾಗಿದ್ದವರು. ಹಳೆಯ ಪರಿಚಯದಿಂದ ಇಬ್ಬರು ಭೇಟಿ ಮತ್ತಷ್ಟು ಗಟ್ಟಿಯಾಗುತ್ತದೆ. ಶ್ರೀಕಂಠ ಶ್ರೀಮಂತಿಕೆಯ ಐಷಾರಾಮಿ ಜೀವನದಲ್ಲಿ ತನ್ನ ಸ್ವಾರ್ಥಕ್ಕಾಗಿ ಬುದ್ಧಿವಂತನಾದ ಚಂದ್ರವನ್ನು ಬಳಸಿಕೊಳ್ಳಲು ವ್ಯವಸ್ಥಿತ ಸಂಚು ರೂಪಿಸುತ್ತಾನೆ. ಭಗ್ನ ಪ್ರೇಮಿಯಂತೆ ಹುಚ್ಚನಂತೆ ಆಗಿದ್ದ ಚಂದ್ರುವನ್ನು ತನ್ನ ಜೊತೆ ಸೇರಿಸಿಕೊಂಡು ಆತನಿಗೊಂದು ಮನೆ ಮಾಡಿ ಕೊಡುತ್ತಾನೆ. ಶ್ರೀಮಂತಿಕೆ ಐಷಾರಾಮಿ ಜೀವನಕ್ಕೆ ಮತ್ತೆ ಚಂದ್ರು ಶ್ರೀಕಂಠನ ಸ್ನೇಹದಿಂದ ಒಳಗಾಗುತ್ತಾನೆ. ಅಲ್ಲದೆ ಶ್ರೀಕಂಠ ತನ್ನ ಖಾಸಗಿ ಮನೆಯಲ್ಲಿ ಚಂದ್ರುವನ್ನು ಇರಿಸಿಕೊಳ್ಳುವ ಮಟ್ಟಕ್ಕೆ ತಂದಿರಿಸುತ್ತಾನೆ. ಅಲ್ಲದೆ ಭಗ್ನ ಪ್ರೇಮಿಯಾಗಿದ್ದ ಚಂದ್ರು ಶ್ರೀಕಂಠನ ಐಷಾರಾಮಿ ಜೀವನದ ಮತ್ತಿನಲ್ಲಿ ವೇಶ್ಯೆಯರ ಸಹವಾಸ-ಒಡನಾಟ ಬೆಳೆಸಿಕೊಂಡು ವ್ಯಕ್ತಿತ್ವದ ಶೀಲ ಹರಣ ಮಾಡಿಕೊಳ್ಳುತ್ತಾನೆ.

ಶ್ರೀಕಂಠನಿಂದಾಗಿ ಚಂದ್ರುವಿನ ವ್ಯಕ್ತಿತ್ವ ಕಳಂಕಿತ ಜೀವನವಾಗಿ ತಿರುಗುತ್ತದೆ.

ಆತನ ಶ್ರೀಮಂತಿಕೆಯ ಐಷಾರಾಮಿ ಜೀವನಕ್ಕೆ ಗುಲಾಮನಂತೆ ಈಡಾಗುತ್ತಾನೆ. ಫ್ಯಾಕ್ಟರಿ ಮಾಲೀಕನಾದ ಶ್ರೀಕಂಠ ತನ್ನ ಲಾಭಕ್ಕಾಗಿ ಚಂದ್ರುವನ್ನು ತನ್ನ ಕಾರ್ಯದರ್ಶಿಯನ್ನಾಗಿ ಮಾಡಿಕೊಳ್ಳುತ್ತಾನೆ. ಆ ಮೂಲಕ ಶ್ರೀಕಂಠನು ತನ್ನ ಭ್ರಷ್ಟಾಚಾರದ ದುರಾಡಳಿತ ಚಟುವಟಿಕೆಗಳಿಗೆ ಚಂದ್ರುವನ್ನು ತೊಡಗಿಸಿಕೊಳ್ಳುತ್ತಾನೆ. ಆಗ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಅದರ ಲಾಭವನ್ನು ಪಡೆದುಕೊಳ್ಳಲು ದೇಶದ್ರೋಹದಂತಹ ಚಟುವಟಿಕೆಗಳಲ್ಲಿ ಚಂದ್ರು ಭಾಗಿಯಾಗುವಂತೆ ಮಾಡಿಬಿಡುತ್ತಾನೆ. ಚಂದ್ರು ಶ್ರೀಮಂತಿಕೆಯ ಐಷಾರಾಮಿ ಜೀವನಕ್ಕೆ ಮಾರಿಕೊಂಡು ಅಸಹಾಯಕ ವ್ಯಕ್ತಿಯಾಗಿ ಪರಿವರ್ತನೆಯಾಗುತ್ತಾನೆ.

ಕಾರ್ಮಿಕರ–ಮಾಲೀಕರ ವರ್ಗ ಹೋರಾಟಗಳಲ್ಲಿ ಶ್ರೀಕಂಠ ಶ್ರೀಮಂತಿಕೆಯ ಮದದಲ್ಲಿ ಹೆಚ್ಚಿನ ಲಾಭಗಳಿಸುವ ದೃಷ್ಟಿಯಿಂದ ಕಾರ್ಮಿಕರ ಮುಷ್ಕರವನ್ನು ಹೊಡೆದು ಹಾಕಲು ಸಂಚುರೂಪಿಸುತ್ತಾನೆ. ಚೆಲುವಯ್ಯನೆಂಬ ಪತ್ರಕರ್ತನನ್ನು ಬಳಸಿಕೊಂಡು ಕಾರ್ಮಿಕರ ಹೋರಾಟದಲ್ಲಿ ಒಡಕು ಉಂಟುಮಾಡಿ, ಅದರ ಲಾಭವನ್ನು ಪಡೆದುಕೊಂಡು ಶ್ರೀಕಂಠ ಕಾರ್ಮಿಕರ ಹೋರಾಟಗಳಲ್ಲಿ ಗಲಾಟೆ ಎಬ್ಬಿಸಿ ಹೋರಾಟಗಾರರನ್ನು ಎರಡು ಗುಂಪುಗಳನ್ನಾಗಿ ಮಾಡಿಸುತ್ತಾನೆ. ಆ ಮೂಲಕ ಕಾರ್ಮಿಕರ ಮುಷ್ಕರವನ್ನು ಭ್ರಷ್ಟಗೊಳಿಸಿ ಹೊಡೆದು ಹಾಕುತ್ತಾನೆ.

ಶ್ರೀಕಂಠ ಈ ಎಲ್ಲಾ ರೀತಿಯ ಹೋರಾಟಗಳಲ್ಲಿ ಕಾರ್ಮಿಕರ ಮುಷ್ಕರವನ್ನು ಹಾಳು ಮಾಡಿ ಕಾರ್ಮಿಕರಿಗೆ ಅನ್ಯಾಯ, ಸಾವು ನೋವುಂಟು ಮಾಡಿದ್ದರು ಶ್ರೀಕಂಠನ ಅಧೀನದಲ್ಲಿ ಚಂದ್ರು ಏನು ಮಾಡಲು ಆಗದೆ ಅಸಹಾಯಕನಾಗಿದ್ದಾನೆ. ಚಂದ್ರು ತನ್ನ ಸಹಪಾಠಿ ನಾರಾಯಣ ಕಾರ್ಮಿಕರ ಹೋರಾಟದಲ್ಲಿ ನಾಯಕತ್ವದಲ್ಲಿದ್ದು ಪೆಟ್ಟು ತಿಂದು ಆತನ ಹೋರಾಟಕ್ಕೆ ನ್ಯಾಯ ದೊರೆಯುವುದಿಲ್ಲ. ಚಂದ್ರುವಿನ ನೈತಿಕತೆ ಕಾದಂಬರಿಯ ಒಳ ಧ್ವನಿಯಲ್ಲಿ ಕಾರ್ಮಿಕರ ಬಡವರ ಬಗ್ಗೆ ಕನಿಕರ ಪಟ್ಟುಕೊಂಡು ಕಾಳಜಿ ವಹಿಸುತ್ತದೆ. ಆದರೆ ವಾಸ್ತವದಲ್ಲಿ ಕಾರ್ಮಿಕರಿಗೆ ಬಡವರಿಗೆ ಯಾವುದೇ ಸಹಾಯ ಸಹಕಾರ ಬೆಂಬಲ ನೀಡದೆ ಅಸಹಾಯಕ ಸ್ಥಿತಿಯಲ್ಲಿ ಕೈಕಟ್ಟಿಕೊಂಡಿರುತ್ತಾನೆ. ಅದಕ್ಕೆ ಕಾರಣ ಚಂದ್ರು ತನ್ನನ್ನು ತಾನು ಶ್ರೀಕಂಠನ ಶ್ರೀಮಂತಿಕೆಗೆ ಮಾರಿಕೊಂಡಿರುವುದೇ ಆಗಿರುತ್ತದೆ.

ಬಡತನದಿಂದ ಮೇಲೇರಿ ಬಂದ ಶ್ರೀಕಂಠಯ್ಯ ಶ್ರೀಮಂತರ ಒಬ್ಬಳೇ ಮಗಳಾದ ಶಾರದೆಯನ್ನು ಶ್ರೀಮಂತಿಕೆಯ ಆಸೆಯಿಂದಲೇ ಮದುವೆಯಾಗಿದ್ದಾನೆ. ಶ್ರೀಕಂಠನ ಮಾವ ದೊಡ್ಡ ಶ್ರೀಮಂತ, ರಾಜಕೀಯವಾಗಿ ಗಣ್ಯ ವ್ಯಕ್ತಿ, ಕಾರ್ಖಾನೆಯ ದೊಡ್ಡ ಮಾಲೀಕ. ಶ್ರೀಕಂಠನ ಹೆಂಡತಿ ಶಾರದೆ ಶ್ರೀಮಂತಿಕೆಯ ಐಷಾರಾಮಿ ಜೀವನದಲ್ಲಿ ತನ್ನ ಗಂಡ ಶ್ರೀಕಂಠನನ್ನು ಮದುವೆಯಾಗಿದ್ದರೂ ತನ್ನ ಸ್ಟೇಟಸ್‌ಗೆ ತಕ್ಕಂತೆ ದೊಡ್ಡ ದೊಡ್ಡ ಶ್ರೀಮಂತರೊಂದಿಗೆ ಪರಿಚಯವಿಟ್ಟುಕೊಂಡು ಅವರ ಜೊತೆಯಲ್ಲಿ ಸ್ನೇಹ ಸಲುಗೆಯಿಂದ ಜೀವನ ನಡೆಸುವುದು ಆಕೆಗೆ ಇಷ್ಟವಾದುದ್ದು. ಶ್ರೀಕಂಠ ಬಡತನದಿಂದ ಶ್ರೀಮಂತಿಕೆಯನ್ನು ಕಟ್ಟಿಕೊಂಡಿದ್ದರಿಂದ ಆಕೆಯು

ಈತನೊಂದಿಗೆ ಸಂಸಾರಿಕವಾಗಿ ಜೀವನ ನಡೆಸಲು ಮುಕ್ತವಾಗಿ ತೆರೆದುಕೊಂಡಿಲ್ಲ. ಹಾಗಾಗಿಯೇ ಶ್ರೀಕಂಠ–ಶಾರದೆ ಇವರ ಜೀವನದಲ್ಲಿ ಹೊಂದಾಣಿಕೆ ಸಾಧ್ಯವಾಗಿಲ್ಲದೆ ನಗರದಲ್ಲಿ ಐಷಾರಾಮಿ ವೇಶ್ಯೆಯರ ಸಹವಾಸ ಇಟ್ಟುಕೊಂಡಿದ್ದಾನೆ. ಇವರಿಗೆ ಮಗು ಒಂದು ಹುಟ್ಟಿರುತ್ತದೆ ಆದರೆ ಈ ಮಗುವನ್ನು ನೋಡಿಕೊಳ್ಳಲು ಇಬ್ಬರೂ ಕ್ಲಬ್–ಫ್ಯಾಕ್ಟರಿಗಳ ಕೆಲಸದ ಒತ್ತಡದಲ್ಲಿ ಮಗು ಅನಾಥವಾಗಿರುತ್ತದೆ. ಮಗುವಿಗೆ ಜ್ವರ ಬಂದು ಬಳಲುವ ಸಂದರ್ಭದಲ್ಲಿ ಮಗುವನ್ನು ನೋಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಒಂದು ಮಧ್ಯರಾತ್ರಿಯಲ್ಲಿ ಶಾರದ ಕ್ಲಬ್‌ನಿಂದ ಮನೆಗೆ ಬಂದಾಗ ಮನೆಯಲ್ಲಿಯೇ ಇದ್ದ ಶ್ರೀಕಂಠ ಜಗಳ ತೆಗೆಯುತ್ತಾನೆ. ಈ ಜಗಳ ವಿಕೋಪಕ್ಕೆ ಹೋಗಿ ಇಬ್ಬರಿಗೂ ಗಲಾಟೆ ಆಗುತ್ತದೆ. ಈ ಗಲಾಟೆಯಲ್ಲಿ ಶ್ರೀಕಂಠನ ಹೊಡೆತದಿಂದ ಶಾರದೆ ಸಾವನಪುತ್ತಾಳೆ. ಈ ಸಾವಿನಿಂದ ಭಯಭೀತನಾದ ಶ್ರೀಕಂಠ ದಿಕ್ಕು ತೋಚದೆ ಚಂದ್ರುವಿನಲ್ಲಿ ಈ ವಿಷಯವನ್ನು ತಿಳಿಸಿ ಸಹಾಯ ಅಪೇಕ್ಷಿಸುತ್ತಾನೆ. ಶ್ರೀಕಂಠನ ಆತ್ಮೀಯನಾದ ಚಂದ್ರು ಶಾರದೆಯ ಸಾವುನ್ನು ಮುಚ್ಚಿ ಹಾಕಲು ವ್ಯವಸ್ಥಿತ ಸಂಚು ರೂಪಿಸಿ ಶಾರದೆಯ ಮನೆಗೆ ಶ್ರೀಕಂಠನನ್ನು ಕರೆದುಕೊಂಡು ಬರುತ್ತಾನೆ. ಆ ಸಮಯದಲ್ಲಿ ಅಲ್ಲಿಯೇ ಶಾರದೆಯ ಶ್ರೀಮಂತ ತಂದೆ, ಪೊಲೀಸ್ ಅಧಿಕಾರಿಗಳು ಬೀಡು ಬಿಟ್ಟಿರುತ್ತಾರೆ. ಚಂದ್ರು ಈಗಾಗಲೇ ದರೋಡೆಕೋರ ಚಲಂನ ಜೊತೆಯಲ್ಲಿ ಆತನ ಒಡನಾಟ ಇರುವುದನ್ನು ಬಲ್ಲ ಪೊಲೀಸ್ ಅಧಿಕಾರಿ ಚಂದ್ರುವಿನಲ್ಲಿ ಪ್ರಶ್ನೆ ಮಾಡಿ ಸಂಶಯ ವ್ಯಕ್ತಪಡಿಸುತ್ತಾನೆ. ಶಾರದೆಯ ಮನೆಯಲ್ಲಿ ಒಡವೆಗಳನ್ನು ಕಳ್ಳತನ ಮಾಡುವ ಸಂಚಿನಲ್ಲಿ ಚಂದ್ರುವೇ ಶಾರದೆಯನ್ನು ಕೊಲೆ ಮಾಡಿರುವ ಕೊಲೆಗಾರನೆಂದು ಪೊಲೀಸನವರು ಅರೆಸ್ಟ್ ಮಾಡುತ್ತಾರೆ. ಅಪರಾಧಿ ಅಲ್ಲದ ಚಂದ್ರು ಶಾರದೆಯ ಕೊಲೆ ಕೇಸಿನಲ್ಲಿ ಹೀಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಶ್ರೀಮಂತಿಕೆಯ ಮದದಲ್ಲಿ ಕೊಲೆ ಮಾಡಿರುವ ಶ್ರೀಕಂಠ ಬಚಾವ್ ಆಗುತ್ತಾನೆ. ಶಾರದೆಯ ಕೊಲೆ ಮಾಡಿರುವ ಶ್ರೀಕಂಠ ತನ್ನ ಜೊತೆಯಲ್ಲಿಯೇ ಬಂದಿದ್ದರು, ಶ್ರೀಕಂಠನೇ ಅಪರಾಧಿ, ಈತನೇ ಕೊಲೆಗಾರನೆಂದು ಚಂದ್ರು ಹೇಳುವುದಿಲ್ಲ. ಇದಕ್ಕೆ ಕಾರಣ ಚಂದ್ರುವಿನ ಅಸಹಾಯಕತೆ, ಶ್ರೀಕಂಠನಿಗೆ ಈಡಾದ ಗುಲಾಮಿತನ, ಆತನ ಋಣಭಾರ ಕಾರಣವಾಗಿದೆ.

ಕಥೆಯ ನಾಯಕ ಚಂದ್ರಶೇಖರ್ ಈ ವಿಮೋಚನಾ ಕಾದಂಬರಿಯಲ್ಲಿ ತಾನು ಮಾಡದೇ ಇರುವ ತಪ್ಪಿಗಾಗಿ ಸಮಾಜದ ವ್ಯವಸ್ಥೆ ನೀಡುವ ಶಿಕ್ಷೆ ಅದು ನ್ಯಾಯವಾದುದ್ದಲ್ಲ. ಹಾಗಾಗಿ ಈ ಸಮಾಜ ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ ಪರಿಷ್ಕರಿಸಿ ನೈತಿಕವಾಗಿ ಅದು ನಡೆಯುವಂತೆ ಮಾಡಬೇಕಾಗಿರುವುದು ಜನಗಳ(ಓದುಗರ) ಅಧಿಕಾರದಿಂದ ಮಾತ್ರ ಸಾಧ್ಯ. ಅದನ್ನು ಸರಿಯಾಗಿ ಚಲಾಯಿಸುವ ವ್ಯವಸ್ಥೆ ತರಬೇಕೆನ್ನುವುದು ಕಾದಂಬರಿಕಾರನ ಪ್ರಾಮಾಣಿಕ ತುಡಿತವಾಗಿದೆ. ಹಾಗಾಗಿಯೇ ಕಥಾನಾಯಕ ಚಂದ್ರಶೇಖರ ಈ ಹಳೆಯ ವ್ಯವಸ್ಥೆಯನ್ನು ಬದಲಿಸಲು ಸಂಪೂರ್ಣ ಅಧಿಕಾರವನ್ನು ಜನಗಳ(ಓದುಗರ) ಜನತಾ ನ್ಯಾಯಾಲಯದಲ್ಲಿ ಚಲಾಯಿಸಲು ನಿರ್ಧರಿಸಿದ್ದಾನೆ. ನಗರ ವ್ಯವಸ್ಥೆ ತಪ್ಪು ಮಾಡದೇ ಇರುವ ತನ್ನನ್ನು ಕೊಲೆಪಾತಕನೆಂದು ಜೈಲಿನಲ್ಲಿ ಇಡಲಾಗಿದೆ. ಆದರೆ ಕೊಲೆ, ಮೋಸ, ಅಪರಾಧಗಳನ್ನು

ಮಾಡಿರುವ ಶ್ರೀಮಂತಿಕೆಯ ದೊಡ್ಡ ದೊಡ್ಡ ಮನುಷ್ಯರು ಜೈಲಿನ ಹೊರಗೆ ರಾಜಾರೋಷವಾಗಿಯೇ ಓಡಾಡಿಕೊಂಡಿದ್ದಾರೆ. ಆದ್ದರಿಂದ ತನ್ನ ಅಪರಾಧಗಳನ್ನು ಪುನರ್ ಪರಿಶೀಲಿಸಿ ನ್ಯಾಯ ಪಡೆಯಲು ನಾಯಕ 'ಆತ್ಮಕಥೆ' ಬರೆಯುವ ಮೂಲಕ ತನ್ನ ಕೊನೆಯ ಕೋರಿಕೆಯನ್ನು ಮಂಡಿಸಿ, ಸ್ವಯಂ ಆಗಿ 'ಆತ್ಮಹತ್ಯೆ' ಮಾಡಿಕೊಳ್ಳುತ್ತಾನೆ. ಆ ಮೂಲಕ ನಗರ ಸಮಾಜದ ಕೆಟ್ಟ ವ್ಯವಸ್ಥೆಯಿಂದ ಕಥಾನಾಯಕ ಚಂದ್ರುವಿಗೆ ವಿಮೋಚನೆ ದೊರೆತಂತೆ ಆಗಿದೆ ಎಂದು ಅಂದುಕೊಂಡಿರುತ್ತಾರೆ. ಇನ್ನೂ ಕಥಾನಾಯಕ ಚಂದ್ರಶೇಖರನ ಕೋರಿಕೆಯಂತೆ 'ಜನತಾ ನ್ಯಾಯಾಲಯದ' ನಿಜವಾದ ತೀರ್ಪಿನಿಂದ ಮುಂದೆ ವಿಮೋಚನೆ ದೊರೆಯುತ್ತದೆಂಬ ಆಕಾಂಕ್ಷೆಯನ್ನು ಬಯಸಿ ಈ ಲೋಕಕ್ಕೆ ವಿದಾಯ ಹೇಳಿದ್ದಾನೆ. ಈ ಮೂಲಕ ಇಲ್ಲಿ ಕಾದಂಬರಿಕಾರರು ತನ್ನ ನಾಯಕನಿಗೆ ನೀಡಿರುವ ತೀರ್ಪನ್ನು ಈ ನಗರ ಸಮಾಜದ ಕೆಟ್ಟ ವ್ಯವಸ್ಥೆಯಿಂದ ತಪ್ಪಿಸಿ, ಜನತಾ ನ್ಯಾಯಾಲಯಕ್ಕೆ ವರ್ಗಾಯಿಸಿ ನಗರದ ಕೆಟ್ಟ ವ್ಯವಸ್ಥೆಯನ್ನು ಬದಲಿಸುವಂತೆ ಅದರ ನಿರೂಪಣ ತಂತ್ರಗಾರಿಕೆ ಪ್ರತಿಪಾದಿಸುತ್ತದೆ.

**ಆಕರ ಗ್ರಂಥಗಳು:**

1. ನಿರಂಜನ. (1954). ವಿಮೋಚನೆ. ವಾಹಿನಿ ಪ್ರಕಾಶನ. ಬೆಂಗಳೂರು.